**ಪ್ರಧಾನ ಸಿವಿಲ್ ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ ಚಿಂಚೋಳಿ**

**ಸಿ.ಸಿ. ನಂ. 239/2023**

| | | | |
|---|---|---|---|
| **ಹೆಸರು** | : | **ಮಂಜುನಾಥ ರೆಡ್ಡಿ** | **ಚಾ.ಸಾ. 1** |
| **ತಂದೆಯ ಹೆಸರು** | : | **ಬಸವರಾಜ** | **ಪ್ರಾ.ಸಾ. 3** |
| **ವಯಸ್ಸು** | : | **34 ವರ್ಷ** | **ದಿನಾಂಕಃ 08-05-2025** |
| **ಉದ್ಯೋಗ** | : | **ಪಿ.ಎಸ್.ಐ** | |
| **ವಾಸಸ್ಥಳ** | : | **ಕಮಲಾಪುರ** | |

**ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಸಹಾಯಕ ಸರಕಾರಿ ಅಭಿಯೋಜಕರಿಂದಃ**

ದಿನಾಂಕ 18-01-2022 ರಿಂದ 31-01-2023 ರವರೆಗೆ ಚಿಂಚೋಳಿ ಪೋಲಿಸ ಠಾಣೆಯಲ್ಲಿ ಪಿ.ಎಸ್.ಐ ಕಾರ್ಯನಿರ್ವಹಿಸಿದ್ದೇನೆ.

ದಿನಾಂಕಃ 30-12-2022 ರಂದು ಮಧ್ಯಾಹ್ನ 2.30 ಗಂಟೆ ಸುಮಾರಿಗೆ ನಾನು ಚಿಮ್ಮನಚೂಡ ಠಾಣೆಯಲ್ಲಿದ್ದಾಗ ಸೇರಿ ಕ್ರಾಸ ಬಸ್ ನಿಲ್ದಾಣ ಹಿಂದೆ ಒಬ್ಬ ವ್ಯಕ್ತಿ ಅಕ್ರಮವಾಗಿ ಸೇಂದಿ ಮಾರಾಟ ಮಾಡುತ್ತಿದ್ದಾರೆ ಎಂದು ಖಚಿತ ಭಾತ್ಮಿ ಬಂದಿದ್ದು, ಆದ್ದರಿಂದ ನನ್ನ ಮೇಲಾಧಿಕಾರಿಗಳ ಸೂಕ್ತ ಮಾರ್ಗದರ್ಶನ ಪಡೆದುಕೊಂಡು ಪಂಚರಾದ ಚಾಸಾ-2 ಮತ್ತು 3 ರವರನ್ನು ಕರೆಸಿ ಅವರಿಗೆ ಭಾತ್ಮಿ ಬಗ್ಗೆ ತಿಳಿಸಿ ಅವರು ಪಂಚರಾಗಲು ಒಪ್ಪಿ ಕೊಂಡ ಮೇರೆಗೆ ನಾನು, ಸಿಬ್ಬಂದಿಯಾದ ಚಾಸಾ-4 ರಿಂದ 6 ಹಾಗೂ ಪಂಚರು ಸೇರಿ ಭಾತ್ಮಿ ಸ್ಥಳಕ್ಕೆ ಮಧ್ಯಾಹ್ನ 2.45 ಗಂಟೆ ಸುಮಾರಿಗೆ ಠಾಣಯಿಂದ ಹೊರಟು ಮಧ್ಯಾಹ್ನ 3.15 ಗಂಟೆ ಸುಮಾರಿಗೆ ಭಾತ್ಮಿ ಸ್ಥಳದಲ್ಲಿ ಮರೆಯಲ್ಲಿ ನಿಂತು ನೋಡಿದಾಗ ಸೇರಿ ಕ್ರಾಸ್ ಬಸ್ ನಿಲ್ದಾಣ ಹಿಂದೆ ಒಬ್ಬ ವ್ಯಕ್ತಿ ಸೇಂದಿ ಮಾರಾಟ ಮಾಡುತ್ತಿರುವುದು ಕಂಡು ಬಂದಿದ್ದು ಅವನ ಮೇಲೆ ಸಿಬ್ಬಂದಿಯೊಂದಿಗೆ ಪಂಚರ ಸಮಕ್ಷಮ ದಾಳಿ ಮಾಡಿ ಅವನ ಹೆಸರು ವಿಚಾರಿಸಿದಾಗ ತನ್ನ ಹೆಸರು ಅರವಿಂದ ತಂದೆ ಮಾಣಿಕ ಜಾಧವ ಎಂದು ತಿಳಿಸಿರುತ್ತಾನೆ. ಸದರಿ ವ್ಯಕ್ತಿಯನ್ನು ನೋಡಿದರೆ ಗುರುತಿಸುತ್ತೇನೆ. (ಆರೋಪಿಯನ್ನು ಗುರುತಿಸಲು ಆರೋಪಿ ಪರ ವಕೀಲರು ಯಾವುದೇ ತಕರಾರು ಇಲ್ಲ ಎಂದು ತಿಳಿಸಿರುತ್ತಾರೆ).

ಅವನ ಮುಂದೆ ಇಟ್ಟುಕೊಂಡ ಸೇಂದಿಯನ್ನು ಪರಿಶೀಲಿಸಿದಾಗ ಅಲ್ಲಿ 15 ಲೀಟರಿನ ಪ್ಲಾಸ್ಟಿಕ ಕೋಡದಲ್ಲಿ ಅಂದಾಜು 10 ಲೀಟರನಷ್ಟು ಸೇಂದಿ ಸಿಕ್ಕಿರುತ್ತದೆ. ನಂತರ ಸಿಕ್ಕ ವಸ್ತುಗಳನ್ನು ಜಪ್ತಿ ಮಾಡಿ ರಾಸಾಯನಿಕ ಪರೀಕ್ಷೆಗೆ ಕಳುಹಿಸಲು 1 ಲೀಟರಿನ ಬಾಟಲಿಯಲ್ಲಿ ಸೇಂದಿಯನ್ನು ತುಂಬಿ ಅದನ್ನು ಸೀಲ ಮಾಡಿ ಮಧ್ಯಾಹ್ನ 3.20 ರಿಂದ 4.20 ರವರೆಗೆ ಜಪ್ತಿ ಪಂಚನಾಮೆಯನ್ನು ಜರುಗಿಸಿ ಪಂಚರ ಸಹಿಗಳನ್ನು ಪಡೆದಿದ್ದೇನೆ.

ಮರಳಿ ಠಾಣೆಗೆ ಸಾಯಂಕಾಲ 5 ಗಂಟೆಗೆ ಬಂದು ಒಂದು ದೂರು, ಜಪ್ತಿ ಪಂಚನಾಮೆ ಹಾಗೂ ಜಪ್ತಿ ಮಾಡಿದ ಮುದ್ದೆಮಾಲುಗಳನ್ನು ಮುಂದಿನ ತನಿಖೆಗಾಗಿ ಚಾಸಾ-9 ರವರಿಗೆ ಸಲ್ಲಿಸಿರುತ್ತೇನೆ.

ಈಗ ನೋಡುತ್ತಿರುವ ದೂರು ನಾನೇ ನೀಡಿದ್ದು ಮತ್ತು ಅದರಲ್ಲಿರುವ ಸಹಿ ನನ್ನದೇ. ಸದರಿ ದೂರನ್ನು ನಿಪಿ-2 ಎಂದು, ನನ್ನ ಸಹಿಯನ್ನು ನಿಪಿ-2(ಎ) ಎಂದು ಗುರುತಿಸಲಾಯಿತು.

ಈಗ ನೋಡುತ್ತಿರುವ ನಿಪಿ-1 ರ ಜಪ್ತಿ ಪಂಚನಾಮೆಯನ್ನು ನಾನೇ ಜರುಗಿಸಿದ್ದು ಮತ್ತು ಅದರಲ್ಲಿರುವ ಸಹಿ ನನ್ನದೇ. ನಿಪಿ-1 ರಲ್ಲಿರುವ ನನ್ನ ಸಹಿಯನ್ನು ನಿಪಿ-1(ಬಿ) ಎಂದು ಗುರುತಿಸಲಾಯಿತು.

ಈಗ ನೋಡುತ್ತಿರುವ ಖಾಲಿ ಬಾಟಲಿಯಲ್ಲಿ ಜಪ್ತಿ ಕಾಲಕ್ಕೆ ಸೇಂದಿಯನ್ನು ತುಂಬಲಾಗಿತ್ತು. ಸದರಿ ಖಾಲಿ ಬಾಟಲಿಯನ್ನು ಮು.ಮಾ-1 ಎಂದು ಗುರುತಿಸಲಾಯಿತು.

**<u>ಪಾಟೀ ಸವಾಲುಃ ಆರೋಪಿತರ ಪರವಾಗಿ ಶ್ರೀ SPR ವಕೀಲರಿಂದಃ</u>**

ದಿನಾಂಕ 01-01-2022 ರಂದು ಸಲಗರ ಬಸಂತಪುರ ಗ್ರಾಮದಲ್ಲಿ ಜಾತ್ರೆ ಇದ್ದ ಕಾರಣ ನಮ್ಮ ಸಿಬ್ಬಂದಿಗೆ ಅಲ್ಲಿ ನೇಮಕ ಮಾಡಲಾಗಿತ್ತು ಎಂದರೆ ಸರಿಯಲ್ಲ. ಸಾಮಾನ್ಯವಾಗಿ ನಾವು ಯಾವ ಸ್ಥಳಕ್ಕೆ ಹೋಗುತ್ತಿರುವ ಬಗ್ಗೆ ಮತ್ತು ಯಾವ ವಸ್ತುಗಳೊಂದಿಗೆ ಹೋಗುತ್ತಿರುವ ಬಗ್ಗೆ ಜನರಲ್ ಡೈರಿಯಲ್ಲಿ ಉಲ್ಲೇಖಿಸುತ್ತೇವೆ ಎಂದರೆ ಸರಿ. ಆ ದಿನ ಘಟನ ಸ್ಥಳಕ್ಕೆ ಯಾವುದೇ ವಸ್ತುವನ್ನು ತೆಗೆದುಕೊಂಡು ಹೋಗಿಲ್ಲ. ಪಂಚರನ್ನು ಚಿಮ್ಮನಚೂಡದಿಂದ ಸಿಬ್ಬಂದಿ ಮುಖಾಂತರ ಕರೆಸಿದ್ದೇನೆ. ಸೇರಿ ಬಸ್ ನಿಲ್ದಾಣದ ಪಕ್ಕದಲ್ಲಿ ದಾಬಾ ಇದೆ ಮತ್ತು ಮನೆ ಇದೆ ಎಂದರೆ ಸಾಕ್ಷಿ ಇರಬಹುದು ಎಂದು ನುಡಿಯುತ್ತಾರೆ. ಸದರಿ ಬಸ್ ನಿಲ್ದಾಣದ ದಕ್ಷಿಣ ದಿಕ್ಕಿಗೆ ಶಾಲೆ ಇದೆ ಎಂದರೆ ಸರಿ. ಘಟನ ಸ್ಥಳಕ್ಕೆ ಸರಕಾರಿ ಜೀಪ ಸಂಖ್ಯೆ KA 32 G 527 ನೇದರಲ್ಲಿ ಹೋಗಿರುತ್ತೇವೆ. ಸದರಿ ಸಂಖ್ಯೆಯನ್ನು ನಿಪಿ-1 ಅಥವಾ 2ರಲ್ಲಿ ಉಲ್ಲೇಖ ಮಾಡಿಲ್ಲ. ಘಟನಾ ಸ್ಥಳದ ಚಿಮ್ಮನಚೂಡ ರಸ್ತೆಯ 30 ಮೀಟರ ದೂರದಲ್ಲಿ ನಿಂತು ಘಟನೆಯಾಗುವುದನ್ನು ನೋಡಿದ್ದೇವೆ. ಆ ದಿನ ನಮ್ಮ ಸಿಬ್ಬಂದಿಯವರು ಸಿವಿಲ್ ಬಟ್ಟೆ ದರಿಸಿದ್ದರು. ಘಟನ ಸ್ಥಳದಲ್ಲಿ ಆರೋಪಿ ಒಬ್ಬನೇ ಇದ್ದ. ಆರೋಪಿಯಿಂದ ಸೇಂದಿ ಮಾರಾಟದಿಂದ ಬಂದ ಯಾವುದೇ ಹಣ ಸಿಕ್ಕಿಲ್ಲ. ಆರೋಪಿಯಿಂದ ಸಿಕ್ಕ ಕೊಡದ ಬಣ್ಣ ನನಗೆ ನೆನಪಿಲ್ಲ. ಸದರಿ ಕೊಡದ ಬಣ್ಣ ನಿಪಿ-1 ಅಥವಾ 2ರಲ್ಲಿ ಉಲ್ಲೇಖಿಸಿಲ್ಲ ಎಂದರೆ ಸರಿ. ಸದರಿ ಸೇಂದಿಯಲ್ಲಿ ಆರೋಪಿ ಮಾರಾಟ ಮಾಡಿರಲಿಲ್ಲ ಮತ್ತು ಮಾರಾಟ ಮಾಡಲು ಪ್ರಯತ್ನಿಸಿರುತ್ತಾನೆ. ಸೇಂದಿ ಎಲ್ಲಿಂದ ತಂದಿರುವ ಬಗ್ಗೆ ನಾನು ಆರೋಪಿಗೆ ಕೇಳಿರುತ್ತೇನೆ ಮತ್ತು ಆತ ಯಾವುದೇ ಸಮರ್ಪಕವಾದ ಉತ್ತರ ನೀಡಿರುವುದಿಲ್ಲ.

ಪಂಚನಾಮೆ ಸ್ಥಳದಲ್ಲಿಯೇ ಮಾಡಿರುತ್ತೇನೆ. ದೂರನ್ನು ಠಾಣೆಯಲ್ಲಿ ಟೈಪ ಮಾಡಿರುತ್ತೇನೆ. ಜಪ್ತಿ ಪಂಚನಾಮೆಯನ್ನು ನಮ್ಮ ಬರಹಗಾರರು ಬರೆದಿರುತ್ತಾರೆ. ಜಪ್ತಿ ಪಂಚನಾಮೆ ಟೈಪ ಮಾಡಲಾಗಿದೆ ಎಂದರೆ ಸರಿ. ಸ್ಥಳದಲ್ಲಿ ನಮ್ಮ ಹತ್ತಿರ ಯಾವುದೇ ಟೈಪ ಮಾಡುವ ಯಂತ್ರ ಇರಲಿಲ್ಲ ಎಂದರೆ ಸರಿ. ಜಪ್ತಿ

ಪಂಚನಾಮೆಯನ್ನು ಲ್ಯಾಪಟಾಪನಲ್ಲಿ ಟೈಪ ಮಾಡಲಾಗಿದೆ. ಸದರಿ ಲ್ಯಾಪಟಾಪ ಠಾಣೆಯ ಲ್ಯಾಪಟಾಪ ಆಗಿತ್ತು. ಸದರಿ ಲ್ಯಾಪಟಾಪ ನಮ್ಮ ಬರಹಗಾರರು ತೆಗೆದುಕೊಂಡು ಬಂದಿರುತ್ತಾರೆ. ಆ ದಿನ ಬರಹಗಾರರು ಲ್ಯಾಪಟಾಪ ಮಾತ್ರ ತೆಗೆದುಕೊಂಡು ಬಂದಿದ್ದರು. ಸ್ಥಳದಲ್ಲಿ ಪಂಚನಾಮೆಯನ್ನು ಟೈಪ ಮಾಡಿ ಚಿಮ್ಮನಚೂಡ ಠಾಣೆಗೆ ಬಂದು ಪ್ರಿಂಟ ತೆಗೆದು ಪಂಚರ ಸಹಿಗಳನ್ನು ಪಡೆದಿದ್ದೇನೆ. ಜಪ್ತಿ ಪಂಚನಾಮೆಯಲ್ಲಿ ಪಂಚರ ಸಹಿಗಳನ್ನು ಚಿಮ್ಮಚೂಡದಲ್ಲಿ ಪಡೆದಿದ್ದೇನೆ ಎಂದರೆ ಸರಿ. ಪಂಚರ ಸಹಿಗಳನ್ನು ಸ್ಥಳದಲ್ಲಿ ಪಡೆದಿಲ್ಲ ಎಂದರೆ ಸರಿ ಸಾಕ್ಷಿ ಮುಂದುವರೆದು FSL ಗಾಗಿ ಸೀಲ್ ಮಾಡಿದ ಚೀಟಿಯಲ್ಲಿ ಪಂಚರ ಸಹಿಗಳನ್ನು ಪಡೆದಿದ್ದೇನೆ ಎಂದು ನುಡಿಯುತ್ತಾರೆ. ಸ್ಥಳದಲ್ಲಿ ಪಂಚನಾಮೆಯನ್ನು ಟೈಪ ಮಾಡಿ ಠಾಣೆಗೆ ಬಂದು ಪ್ರಿಂಟ ಮಾಡಿರುವ ಬಗ್ಗೆ ನಿಪಿ-1 ರಲ್ಲಿ ಉಲ್ಲೇಖವಿಲ್ಲ ಎಂದರೆ ಸರಿ.

ಸ್ಥಳದಲ್ಲಿ ನಾವು 1-1.10 ಗಂಟೆ ಇದ್ದೇವು. ನಾನು ಯಾವುದೇ ಸಾಕ್ಷಿದಾರರ ಹೇಳಿಕೆಯನ್ನು ಪಡೆದಿಲ್ಲ. ಆರೋಪಿ ಜೆ.ಸಿ.ಬಿ ಹಿತ್ತಾಚಿ ನಡೆಸುತ್ತಾನೆ ಎಂದು ಅಂತಿಮ ವರದಿಯಲ್ಲಿ ಉಲ್ಲೇಖವಿದೆ ಎಂದರೆ ಸರಿ. ಆರೋಪಿ ಜಾತ್ರೆ ಇದ್ದ ಕಾರಣ ಗ್ರಾಮಕ್ಕೆ ಬಂದಿದ್ದ ಮತ್ತು ಗ್ರಾಮಸ್ಥರಿಗೆ ಕೂಡಿದು ತೊಂದರೆ ಕೋಡುತ್ತಾನೆ ಎಂಬ ಉದ್ದೇಶದಿಂದ ಗ್ರಾಮಸ್ಥರು ಆರೋಪಿಯ ವಿರುದ್ದ ಪ್ರಕರಣ ದಾಖಲಿಸಿ ಎಂದು ಹೇಳಿದಕ್ಕೆ ಈ ರೀತಿ ಆರೋಪಿಯ ವಿರುದ್ದ ಸುಳ್ಳು ಪ್ರಕರಣ ದಾಖಲಿಸಿದ್ದೇನೆ ಎಂದರೆ ಸರಿಯಲ್ಲ. ಆರೋಪಿ ಯಾವುದೇ ತಪ್ಪು ಮಾಡದೇ ಇದ್ದರು ಸಹ ಬೇರೆಯವರ ಮಾತು ಕೇಳಿ ಸುಳ್ಳು ಪ್ರಕರಣ ದಾಖಲಿಸಿದ್ದೇನೆ ಎಂದರೆ ಸರಿಯಲ್ಲ. ಸ್ಥಳದಲ್ಲಿ ಆರೋಪಿಯಿಂದ ಯಾವುದೇ ವಸ್ತು ಜಪ್ತಿ ಮಾಡಿಲ್ಲ ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇಲ್ಲಾ**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)**

**ಓ.ಹೇ.ಕೇ. ಸರಿ ಇದೆ.**

**ಪ್ರಧಾನ ಪ್ರ.ದ.ನ್ಯಾ.ದಂ. ಚಿಂಚೋಳಿ**